ಕರ್ನಾಟಕ ವಿಧಾನಸಭೆ

ಗುರುವಾರ 7ನೇ ಜುಲೈ 2004 ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಮಧ್ಯಾಹ್ನ 1.00 ಗಂಟೆ 6 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣ) ರವರು ಪೀಠವನ್ನು ಅಲಂಕರಿಸಿದರು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯ:

ವಿಷಯ: ಮಾನ್ಯ ವಾರ್ತಾ ಸಚಿವರು ಲೋಕೋಪಯೋಗಿ ಇಲಾಖೆಯ ಬಗ್ಗೆ ಮಾಡಿದ್ದಾರೆನ್ನಲಾದ ಹೇಳಿಕೆ ಬಗ್ಗೆ.

ಶ್ರೀ ಬಿ.ಎಸ್,ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಈ ಸದನ ಸುಸೂತ್ರವಾಗಿ ನಡೆಯಬೇಕು ಎನ್ನುವುದು ನಮ್ಮ ಅಪೇಕ್ಷೆ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಈಗಲಾದರೂ ವಿನಂತಿ ಮಾಡುತ್ತೇನೆ. ನಾನು ಇವತ್ತು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ವೆಂಕಟೇಶ್: ಮಾನ್ಯ ಅಧ್ಯಕ್ಷರೇ, ...

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಭ್ರಷ್ಟಾಚಾರ ನಡೆದಿದೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ ಎನ್ನುವ ಬಗ್ಗೆ ದಾಖಲೆಗಳು ಇವೆ. ಶ್ರೀ ಅಲಂಗೂರ್ ಶ್ರೀನಿವಾಸ್ ಅವರು ಬಹಳ ಡ್ಯಾಮೇಜಿಂಗೆ ಆದ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಇವತ್ತು ...

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಕೆ.ಎಸ್.ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ಈಟಿವಿಯಲ್ಲೂ, ಉದಯ ಟಿವಿಯಲ್ಲೂ ರಿಪೋರ್ಟ್ ಬಂದಿದೆ. ದಯವಿಟ್ಟು ಆ ಕ್ಯಾಸೆಟ್ ಅನ್ನು ಹಾಕಿಸಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಸಮ್ಮಿಶ್ರ ಸರ್ಕಾರ ರಚನೆಗೆ ಮಾನ್ಯ ದೇವೇಗೌಡರು ಸಹಕರಿಸದ ಕಾರಣಕ್ಕಾಗಿಯೇ ಕಾಂಗ್ರೆಸ್‌ನ ಬಹುತೇಕ ಮುಖಂಡರು ಜೈಲಿಗೆ ಹೋಗುವುದು ತಪ್ಪಿತು ಎಂಬುದನ್ನು ಮರೆಯಬಾರದು ಎಂದು ಸಚಿವರು ಹೇಳಿದ್ದಾರೆ. ಅಂದರೆ ಕ್ಯಾಬಿನೆಟ್ ಮಿನಿಸ್ಟರ್‌ಗಳೇ ಮಾನ್ಯ ಮುಖ್ಯಮಂತ್ರಿಗಳ ವಿರುದ್ಧ, ಕಾಂಗ್ರೆಸ್ ಮುಖಂಡರ ವಿರುದ್ಧ ಹೇಳಿಕೆಯನ್ನು ಕೊಡುತ್ತಿರುವಂತಹ ಸಂದರ್ಭ ಇದೆ. ಮಾನ್ಯ ಶಿವರಾಂ ಅವರು ಇವತ್ತು ಬೆಳಿಗ್ಗೆ ಈಟಿವಿ, ಉದಯ ಟಿವಿ ಯಲ್ಲಿ ಹೇಳಿದಂತಹ ಕ್ಯಾಸೆಟ್‌ಗಳನ್ನು ನಾನು ನಿಮಗೆ ಕೊಡುತ್ತೇನೆ. ಈ ರೀತಿ ನಡೆಯುತ್ತಿರಬೇಕಾದರೆ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ವಿನಂತಿ ಮಾಡುವುದು ಏನು? ಒತ್ತಾಯ ಮಾಡುವುದು ಏನು? ನೀವು ಈ ಹಗರಣ ಏನಾಗಿದೆ ಎಂಬ ಬಗ್ಗೆ ಸದನದ

ಸಮಿತಿಯಿಂದಾದರೂ ತನಿಖೆ ಮಾಡಿಸಿ. ಲೋಕೋಪಯೋಗಿ ಇಲಾಖೆಯಡಿ, ಕೆಪಿಟಿಸಿಎಲ್‌ನಲ್ಲಿ ಮಾನ್ಯ ಶಿವರಾಂ ಅವರು ಹಗರಣದ ಬಗ್ಗೆ ಹೇಳಿದ್ದಾರೋ, ಸದನದ ಸಮಿತಿಯಿಂದಾದರೂ ತನಿಖೆ ಮಾಡಿಸಿ. ಅಥವಾ ಲೋಕಾಯುಕ್ತಕ್ಕಾದರೂ ಇದನ್ನು ರೆಫರ್ ಮಾಡಿ. ಅಥವಾ ನಿಮಗೆ ಅದು ಸಾಧ್ಯವಿಲ್ಲ ಎನ್ನುವುದಾದರೆ...

ಶ್ರೀ ಎಂ.ಪಿ. ವೆಂಕಟೇಶ್: ನೀವು ಹೇಳಿದ ಹಾಗೆ...

(ಗೊಂದಲ)

ಅಧ್ಯಕ್ಷರು: ಈಗ ಸ್ಟೇಟ್‌ಮೆಂಟ್ ಮಾಡಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ಅಧಿವೇಶನ ಸಮಯ ಹಾಳಾಗಬೇಕು ಎನ್ನುವುದು ಅವರ ಷಡ್ಯಂತ್ರ , ಆಡಳಿತ ಪಕ್ಷದಿಂದಲೇ ಇದನ್ನು ಮಾಡುತ್ತಿದೆ. ಹೊರಗಡೆ ಒಬ್ಬೊಬ್ಬ ಸಚಿವರುಗಳು ಒಂದೊಂದು ಹೇಳಿಕೆಯನ್ನು ಕೊಡುತ್ತಿದ್ದಾರೆ. ಸರ್ಕಾರದಲ್ಲಿ ಭ್ರಷ್ಟಾಚಾರ ತಾಂಡವಾಡುತ್ತಿದೆ ಎಂದು ಮಂತ್ರಿಗಳೇ ಹೇಳಿಕೆಯನ್ನು ಕೊಡುವಂತಹ ಪ್ರಯತ್ನ ಆಗಿದೆ. ಮಾನ್ಯ ಹೊರಟ್ಟಿಯವರು ಈ ರೀತಿ ಹೇಳಿಕೆಯನ್ನು ಕೊಟ್ಟಿದ್ದಾರೆ. ಪತ್ರಕರ್ತರಿಗೆ ಇದನ್ನು ಬರೆದುಕೊಳ್ಳಿ, ಜೈಲಿಗೆ ಹೋಗುವ ಕಾಂಗ್ರೆಸ್...

(ಗೊಂದಲ)

ಅಧ್ಯಕ್ಷರು: ಮಾನ್ಯ ಯಡಿಯೂರಪ್ಪನವರೇ, ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕರೆದಿದ್ದೇನೆ. ಸಭಾ ನಾಯಕರು.

(ಗೊಂದಲ)

ಅಧ್ಯಕ್ಷರು: ಮಾನ್ಯ ಸಭಾ ನಾಯಕರು ಹೇಳಿಕೆ ಮಾಡುತ್ತಾರೆ. ದಯಮಾಡಿ...

ಶ್ರೀ ಬಿ.ಎಸ್.ಯಡಿಯೂರಪ್ಪ: ನಿನ್ನೆ ಸದನದಲ್ಲಿ ಕೊಟ್ಟಂತಹ ಹೇಳಿಕೆ ಸುಳ್ಳು ಹೇಳಿಕೆ. ಒತ್ತಾಯ ಮಾಡಿ ಹೇಳಿಕೆಯನ್ನು ಕೊಡಿಸಿದ್ದಾರೆ.

ಅಧ್ಯಕ್ಷರು: ನಾನು ಮಾನ್ಯ ಸಭಾ ನಾಯಕರನ್ನು ಕರೆದಿದ್ದೇನೆ. ದಯಮಾಡಿ ಅವರು ಏನು ಹೇಳುತ್ತಾರೋ ಕೇಳೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ನಾವು ಡಿಸ್ಟರ್ಬ್ ಮಾಡುವುದಿಲ್ಲ. ಆದರೆ ನಿಮ್ಮ ಸದಸ್ಯರಿಗೆ ಹೇಳಿ. ವಿರೋಧ ಪಕ್ಷದ ನಾಯಕರು ಎದ್ದು ನಿಂತುಕೊಂಡು ಮಾತನಾಡುವಾಗ ಗೌರವದಿಂದ ನಡೆದುಕೊಳ್ಳಬೇಕೆಂದು ಮೊದಲು ಅವರಿಗೆ ಪಾಠ ಹೇಳಿ.

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಯವರು ಮಾತನಾಡುತ್ತಾರೆ. ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು): ಮಾನ್ಯ ಸಭಾಧ್ಯಕ್ಷರೆ, ಈಗ ಸದನದ ಕಾರ್ಯಕಲಾಪ ನಡೆಯಬೇಕು. ರಾಜ್ಯದ ಸಮಗ್ರ ಸಮಸ್ಯೆಗಳ ಬಗ್ಗೆ ಇಲ್ಲಿ ಚರ್ಚೆಯಾಗಬೇಕು. ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಪ್ರಪ್ರಥಮವಾಗಿ ತಾವೆಲ್ಲರೂ ದೊಡ್ಡ ಮನಸ್ಸು ಮಾಡಿ, ಅಗಸ್ಟ್ 5ನೇ ತಾರೀಖಿನವರೆಗೆ ಈ ಸದನವನ್ನು ನಡೆಸುತ್ತಿದ್ದೇವೆ. ಈಗಾಗಲೇ ಕೃಷಿ ಇಲಾಖಾ ಬೇಡಿಕೆಗಳ ಮೇಲೆ ಚರ್ಚೆ ಪ್ರಾರಂಭವಾಗಿದ್ದು, ಬಹಳ ಮಹತ್ವದಿಂದ ಅನೇಕ ವಿಚಾರಗಳ ಬಗ್ಗೆ ಇನ್ನೂ ಚರ್ಚೆ ನಡೆದಿಲ್ಲ. ನಮ್ಮ ಮಂತ್ರಿಗಳಾದ ಶಿವರಾಂರವರು ಒಂದು ಹೇಳಿಕೆ ನೀಡಿದ್ದಾರೆ. ಒಬ್ಬರು ಮಂತ್ರಿಗಳು ಸರ್ಕಾರದಲ್ಲಿರುವ ಮತ್ತೊಬ್ಬ ಮಂತ್ರಿಗಳ ಮೇಲೆ ಹೇಳಿಕೆ ಕೊಟ್ಟಿರುವುದರ ಬಗ್ಗೆ ಸ್ಪಷ್ಟೀಕರಣ ನೀಡಬೇಕೆಂದು ಕೇಳಿದರು. ತದನಂತರ, ತಮ್ಮ ಕೊಠಡಿಯಲ್ಲಿ ವಿಚಾರ-ವಿಮರ್ಶೆಯಾಗಿದೆ. ಪ್ರಪ್ರಥಮವಾಗಿ ಮಾನ್ಯ ವಿರೋಧ ಪಕ್ಷದ ನಾಯಕರು ಹೊರಗಡೆ ನೀಡಿರುವ ಹೇಳಿಕೆಗಳ ಬಗ್ಗೆ ಪ್ರಸ್ತಾಪ ಮಾಡಿದ್ದರೂ ಸಹ ನಾವೆಲ್ಲರೂ ಇದಕ್ಕೆ ಸ್ಪಂದಿಸಬೇಕು, ಇದು ವಿರೋಧ ಪಕ್ಷದ ಬೇಡಿಕೆಯಾಗಿದೆ ಎನ್ನುವ ರೀತಿಯಲ್ಲಿ ಸದನದಲ್ಲಿ ಶಿವರಾಂರವರು ಹೇಳಿಕೆ ಕೊಟ್ಟಿದ್ದಾರೆ. ಅವರು ಹೇಳಿಕೆ ನೀಡಲಿ ಆ ರೀತಿಯಾದ ಆರೋಪವನ್ನು ನಾನು ಮಾಡಿಲ್ಲ. ಮತ್ತು ಇದರಿಂದ ಯಾರ ಮನಸ್ಸಿಗಾದರೂ ನೋವಾಗಿದ್ದರೆ, ಅದರ ಬಗ್ಗೆ ವಿಷಾದ ವ್ಯಕ್ತಪಡಿಸುತ್ತೇನೆ. ಎಂಬ ಮಾತನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಅಲ್ಲದೆ, ವಿರೋಧ ಪಕ್ಷದವರು ಹೇಳಿದ ಮಾತಿಗೆ ಸರ್ಕಾರ ನಡೆಸುವ ನಾವೆಲ್ಲರೂ ಆ ಬಗ್ಗೆ ಗಮನಹರಿಸಿಲ್ಲವೆಂದರೆ, ಆ ಮಾತು ಬೇರೆ. ಆದರೆ, ಇವೊತ್ತು ವಿರೋಧ ಪಕ್ಷದವರು ಈ ರೀತಿಯ ಹಠ ಹಿಡಿಯುವ ಮೂಲಕ, ಈ ಸದನ ಯಾವ ರೀತಿ ನಡೆಯುತ್ತಿದೆ' ಎಂದು ಇಡೀ ರಾಜ್ಯದ ಜನರು ನೋಡುತ್ತಿದ್ದಾರೆ. ಒಂದು ವೇಳೆ ತಾವು ಪ್ರಸ್ತಾಪಿಸಿದ ಬೇಡಿಕೆಗೆ ಸಂಬಂಧಿಸಿದಂತೆ ನಾವು ಏನೂ ಗಮನಹರಿಸದೆ ಹೋದರೆ, ಸ್ಪಂದಿಸದೇ ಹೋದರೆ, ಆಗ ಇಂತಹ ಮಾತುಗಳನ್ನಾಡಬೇಕು. ಇವೊತ್ತು ಶಿವರಾಂರವರು ಹೇಳಿಕೆ ಕೊಟ್ಟಿದ್ದಾರೆ. ನಿನ್ನೆ ಕೂಡ ವಿರೋಧ ಪಕ್ಷದ ನಾಯಕರಾದಿಯಾಗಿ ಇತರ ಸದಸ್ಯರು ಪ್ರಸ್ತಾಪಿಸಿದಾಗ ತಾವು ಸದನವನ್ನು ಮುಂದೂಡಿದಿರಿ. ಇವೊತ್ತು ಬೆಳಿಗ್ಗೆ 11.00 ಗಂಟೆಗೆ ಸದನ ಪ್ರಾರಂಭವಾಗಬೇಕಿತ್ತು. ತಮ್ಮ ಕೊಠಡಿಯಲ್ಲಿ ಸುದೀರ್ಘವಾದ ಮಾತುಕತೆಯಾಗಿದೆ. ಆ ಮಾತುಕತೆ ಆಧಾರದ ಮೇರೆಗೆ ವಿರೋಧ ಪಕ್ಷದ ನಾಯಕರಿಗೆ ಹೇಳುವುದಾದರೆ, ತಮ್ಮ ವಿಚಾರಕ್ಕೆ ಸರ್ಕಾರ

ಸ್ಪಂದಿಸಿದೆ. ಸಂಬಂಧಪಟ್ಟ ಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ, ಮತ್ತು ಹೇಳಿಕೆ ಕೊಟ್ಟ ನಂತರ ಆ ವಿಷಯದ ಬಗ್ಗೆಯೇ ನಾವು ಮುಂದುವರೆಸಿಕೊಂಡು ಹೋಗಬಾರದು. ಅವರು ಸಮಾಧಾನ ತರುವ ರೀತಿಯಲ್ಲಿ ಹೇಳಿಕೆ ಕೊಟ್ಟಿದ್ದಾರೆ.

ಇವೊತ್ತು ತಾವು ಮತ್ತೊಂದು ವಿಚಾರವನ್ನು ಪ್ರಸ್ತಾಪಿಸುತ್ತಿದ್ದೀರಿ. ಇದು ಸಮ್ಮಿಶ್ರ ಸರ್ಕಾರ ರಾಜಕೀಯ ಪಕ್ಷಗಳು ಹೊರಗಡೆ ನೀಡಿರುವ ಹೇಳಿಕೆಗಳನ್ನು ಸದನದಲ್ಲಿ ಪ್ರಸ್ತಾಪಿಸುವುದೇಕೆ? ಬೇಕಾಗಿಲ್ಲ ನಾನು ಅಧ್ಯಕ್ಷರ ಮುಖಾಂತರ ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಮನವಿ ಮಾಡಿಕೊಳ್ಳುತ್ತಿರುವುದೇನೆಂದರೆ, ಇವೊತ್ತು ಸದನದ ಕಾರ್ಯಕಲಾಪಗಳು ನಡೆಯಬೇಕಾಗಿದೆ. ಚರ್ಚೆಗಳಾಗಬೇಕಾಗಿದೆ. ಚರ್ಚೆಗಳಿಗೆ ನಾವು ಉತ್ತರಗಳನ್ನು ನೀಡಬೇಕಾಗಿದೆ. ಇನ್ನೂ ಒಂದು ತಿಂಗಳ ಕಾಲ ನಡೆಯುವ ಅಧಿವೇಶನದಲ್ಲಿ ಮಹತ್ವದ ವಿಚಾರಗಳು ಚರ್ಚೆಯಾಗಲಿವೆ. ಈಗಾಗಲೇ ಯಾವ್ಯಾವ ವಿಷಯಗಳನ್ನು ಪ್ರಸ್ತಾಪಿಸಿದ್ದೀರಿ, ಅದಕ್ಕೆಲ್ಲಾ ಉತ್ತರಿಸಿದ್ದೇವೆ. ಇವೊತ್ತಿನ ಸಮ್ಮಿಶ್ರ ಸರ್ಕಾರದಲ್ಲಿ ನಾನು ಇದ್ದೇನೆ. ಉಪ ಮುಖ್ಯಮಂತ್ರಿಗಳಾಗಿರುವ ಸಿದ್ದರಾಮಯ್ಯನವರಿದ್ದಾರೆ. ಅನೇಕ ಹಿರಿಯ ಮಂತ್ರಿಗಳಿದ್ದಾರೆ. ನಮ್ಮಗಳ ಜವಾಬ್ದಾರಿ ಏನೆಂಬುದು ನಮಗೆಲ್ಲರಿಗೂ ಗೊತ್ತಿದೆ. ಅದರ ಬಗ್ಗೆ ನಿಗಾ ವಹಿಸುತ್ತೇವೆ. ಇವೊತ್ತು ಕೂಡ ಸಂಪುಟ ಸಭೆ ನಡೆಯಲಿದೆ. ಅಲ್ಲಿ ಚರ್ಚೆಸುತ್ತೇವೆ. ಆದಕಾರಣ, ತಾವೆಲ್ಲರೂ ಈ ಬಗ್ಗೆ ಯಾವುದೇ ಆತಂಕಕೊಳಗಾಗದೆ ಸದನದ ಕಾರ್ಯಕಲಾಪಗಳನ್ನು ನಡೆಸಲು ಸಹಕರಿಸಬೇಕು. ತಾವು ಸಹಕಾರ ಕೊಟ್ಟಲ್ಲಿ ಈ ಸದನ ಸರಿಯಾಗಿ ನಡೆಯುತ್ತದೆ ಎಂಬ ಮಾತನ್ನು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): ಸಭಾಧ್ಯಕ್ಷರೆ, ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಪ್ರತಿಪಕ್ಷದವರಾಗಿ ಕಳೆದ ಹದಿನಾಲ್ಕು ತಿಂಗಳುಗಳಿಂದಲೂ ನಾವು ಬಹಳ ಜವಾಬ್ದಾರಿಯಿಂದ ನಡೆದುಕೊಂಡಿದ್ದೇವೆ. ಒಂದು ಕ್ಯಾಬಿನೆಟ್‌ನಲ್ಲಿ ಜಂಟಿ ಜವಾಬ್ದಾರಿ ಇರುತ್ತದೆ. ಇಂತಹ ಸಂದರ್ಭದಲ್ಲಿ ಪ್ರತಿನಿತ್ಯವೂ ಸಚಿವರು ಒಂದೊಂದು ಹೇಳಿಕೆಗಳನ್ನು ಕೊಡುತ್ತಾ ಸರ್ಕಾರದ ಬಗ್ಗೆ ನಮಗೆ ನಂಬಿಕೆ ಇಲ್ಲ, ಮುಖ್ಯಮಂತ್ರಿ ಬಗ್ಗೆ ನಮಗೆ ಇಲ್ಲ, ಜೈಲಿಗೆ ಹೋಗುವಂತಹವರು ಕ್ಯಾಬಿನೆಟ್‌ನಲ್ಲಿದ್ದಾರೆ. ಎನ್ನುವಂತಹ ಹೇಳಿಕೆಗಳನ್ನು ಕೊಟ್ಟನಂತರ, ಇಂತಹ ಅರ್ಥ ಬರುವ ರೀತಿಯಲ್ಲಿ ಹೇಳಿಕೆಗಳನ್ನು ಕ್ಯಾಬಿನೆಟ್ ಮಿನಿಸ್ಟರ್ ಒಬ್ಬರು ಹೇಳುತ್ತಾರೆಂದರೆ, ಈ ರಾಜ್ಯದ ಹಿತವನ್ನು ಇವೊತ್ತು ನೀವು ಕಾಪಾಡಬಹುದೇ ಎನ್ನುವ ಪ್ರಶ್ನೆ ಇಲ್ಲಿ ಎದ್ದೇಳುತ್ತದೆ. ಈ ಸಂದರ್ಭದಲ್ಲಿ ನೀವು ಏನು ಮಾಡಬೇಕೆಂದರೆ, ಈ ತರಹದ ಹೇಳಿಕೆ ಕೊಟ್ಟವರನ್ನು ಹದ್ದುಬಸ್ತಿನಲ್ಲಿಡಬೇಕು. ಇಲ್ಲದಿದ್ದರೆ, ಅವರಿಂದ ರಾಜೀನಾಮೆ

ತೆಗೆದುಕೊಳ್ಳಬೇಕು. ಮತ್ತು ಹಾಸನ ಜಿಲ್ಲೆಯಲ್ಲಿ ಪಿಡಬ್ಲ್ಯೂಡಿ ಮತ್ತು ಕೆಪಿಟಿಸಿಎಲ್‌ನಲ್ಲಿ ಏನು ಹಗರಣ ನಡೆದಿದೆ? ಹಗರಣ ನಡೆದಿದೆಯೆಂದು ನಾವೇನೂ ಹೇಳಲಿಲ್ಲ. ಅದನ್ನು ನಿಮ್ಮ ಕ್ಯಾಬಿನೆಟ್ ಮಿನಿಸ್ಟರ್‌ರವರೇ ಎಲೆಕ್ಟ್ರಾನಿಕ್ ಮೀಡಿಯಾ ಮೂಲಕ ಹೇಳಿರುವಂಥಾದ್ದು, ಈ ಕುರಿತಾದ ದಾಖಲೆಗಳನ್ನು ಕೊಡುವುದಕ್ಕೆ ಸಿದ್ದರಿದ್ದೇವೆ. ಇವೊತ್ತು ಅವರಿಂದ ಬಲವಂತವಾಗಿ ಆ ಹೇಳಿಕೆ ಕೊಡಿಸಿದರೋ ಮತ್ತೊಂದು ನಾಳೆ ಶಿವರಾಂರವರು ಅದನ್ನು ರಿಯಲೈಸ್ ಮಾಡಿಕೊಂಡು, ಅವರು ಬಲಿಪಶುವಾದರು. ನಿಜ ಹೇಳಬೇಕೆಂದರೆ, ಶಿವರಾಮುರವರು ಒಬ್ಬ ಪ್ರಾಮಾಣಿಕ ಹೋರಾಟಗಾರರು. ಅವೊತ್ತಿನಿಂದ ಇವೊತ್ತಿನವರೆಗೂ ಹೋರಾಟ ಮಾಡಿಕೊಂಡು ಬಂದಿರುವವರು. ಈವತ್ತೂ ಯಾವುದೋ ಒಂದು ಒತ್ತಾಯಕ್ಕೆ ಮಣಿದು ಒಂದು ಹೇಳಿಕೆ ಕೊಟ್ಟರು. ಅವರು ಇವೊತ್ತು ಸಂಕಟಪಡುತ್ತಿದ್ದಾರೆ. ನೋಡೋಣ, ಸತ್ಯ ಯಾವತ್ತೋ ಒಂದು ದಿವಸ ಹೊರಗೆ ಬರುತ್ತದೆ.

ಈಗ ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದೇನಂದರೆ, ದಯಮಾಡಿ ಹಾಸನ ಜಿಲ್ಲೆಯಲ್ಲಿ ಕೆಪಿಟಿಸಿಎಲ್ ಮತ್ತು ಪಿಡಬ್ಲ್ಯೂಡಿಯಲ್ಲಿ ನಡೆದಿರುವ ಹಗರಣದ ಬಗ್ಗೆ ನೀವು ಯಾರಿಂದಲಾದರೂ ತನಿಖೆ ಮಾಡಿಸಿ, ನಿಮ್ಮ ಚೀಫ್ ಸೆಕ್ರೆಟರಿಯವರಿಂದಲೇ ಮಾಡಿಸಿ, ಸಿಓಡಿಯಿಂದಲೇ ಮಾಡಿಸಿ ಅಥವಾ ಸದನ ಸಮಿತಿ ಮುಖಾಂತರ ತನಿಖೆ ಮಾಡಿಸಿ. ಸದನ ಸಮಿತಿಯಲ್ಲಿ ನಿಮ್ಮವರೇ ಅಧ್ಯಕ್ಷರಾಗಿರುತ್ತರೆ. ಅಂದರೆ, ತನಿಖೆಗೇಕೆ ನೀವು ಹಿಂದು–ಮುಂದು ನೋಡುತ್ತಿದ್ದೀರಿ? ಸತ್ಯ ಹೊರಗೆ ಬರುತ್ತದೆಂಬ ಭಯವೇ? ಇದಿಷ್ಟೂ ನೀವು ಮಾಡಲಿಲ್ಲವೆಂದರೆ, ಪ್ರತಿಪಕ್ಷವಾಗಿ ನಾವು 79 ಜನರು ಇಲ್ಲಿದ್ದುಕೊಂಡು, ಈ ಭಾಗದಲ್ಲಿರುವ ಎಲ್ಲಾ ಮಾನ್ಯ ಸದಸ್ಯರ ಬೇಡಿಕೆ ಒಂದೇ ಇದೆ. ಸ್ವಾಮಿ. ಆದಷ್ಟೂ ಬೇಗ ನೀವು ಮಾಡಿ. ಏಕೆಂದರೆ, ರಾಜ್ಯದ ಅನೇಕ ಜ್ವಲಂತ ಸಮಸ್ಯೆಗಳ ಬಗ್ಗೆ ಇಲ್ಲಿ ಚರ್ಚೆಯಾಗಬೇಕು.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು): ನಿನ್ನೆ ಶಿವರಾಂರವರು ಹೇಳಿಕೆ ಕೊಟ್ಟಿದ್ದಾರೆ. ಇನ್ನೂ ಕೂಡ ಇಲಾಖೆ ಬಗ್ಗೆ ತನಿಖೆಯಾಗಬೇಕೆಂದು ಹೇಳಿದ್ದಾರೆ. ಇಲಾಖಾ ಮಂತ್ರಿಗಳು ವಿದೇಶಕ್ಕೆ ಹೋಗಿದ್ದಾರೆ. ಅವರು 8ನೇ ತಾರೀಖು ಬರುತ್ತಾರೆ. ಅವರ ಜೊತೆ ಸಹ ಸಮಾಲೋಚನೆ ಮಾಡಿ ಅದರ ಬಗ್ಗೆ ಏನು ಕ್ರಮ ಕೈಗೊಳ್ಳಬೇಕಾಗಿದೆ ಎಂಬುದರ ಬಗ್ಗೆ ನಾವು ಮಾತನಾಡುತ್ತೇವೆ, ಅಷ್ಟೆ. ಎರಡನೆಯದಾಗಿ ನಿಮ್ಮ ಸಂಪುಟದ ಒಬ್ಬ ಸಚಿವ ಜೈಲಿಗೆ ಹೋಗುವಂತಹವರು ಕ್ಯಾಬಿನೆಟ್‌ನಲ್ಲಿದ್ದಾರೆ ಎಂದು ಪ್ರಸ್ತಾಪಿಸಿರುವುದಕ್ಕೆ ಆ ವಿಚಾರ ನನಗೆ ಬಿಟ್ಟಿದ್ದು ಅವರು ನಾವು ಚರ್ಚೆ ಮಾಡುತ್ತೇವೆ. ಈ ವಿಚಾರವನ್ನು ನೀವು ನಮ್ಮ ಗಮನಕ್ಕೆ

ತಂದಿರುವುದಕ್ಕೆ ಧನ್ಯವಾದಗಳು. ನಾವು ಅದರ ಬಗ್ಗೆ ಚರ್ಚಿಸುತ್ತೇವೆ. ಅದು ಆಡಳಿತಕ್ಕೆ ಸಂಬಂಧಿಸಿರುವ ವಿಚಾರವಾಗಿದ್ದರೆ ನೋಡುತ್ತೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಕ್ಯಾಬಿನೆಟ್‌ನಲ್ಲಿ ಯಾರನ್ನು ಇಟ್ಟುಕೊಳ್ಳಬೇಕೋ ಬಿಡಬೇಕೋ ಎಂಬುದು ನಿಮ್ಮ ಪಕ್ಷಕ್ಕೆ ಹಾಗೂ ಮುಖ್ಯಮಂತ್ರಿಗಳಾದ ನಿಮಗೆ ಬಿಟ್ಟಿದ್ದು. ಆದರೆ, ಕ್ಯಾಬಿನೆಟ್ ಸಚಿವರೇ ರಸ್ತೆಯಲ್ಲಿ ನಿಂತುಕೊಂಡು ಎಲೆಕ್ಟ್ರಾನಿಕ್ ಮೀಡಿಯಾ, ಪತ್ರಿಕಾ ಮಾಧ್ಯಮದವರನ್ನೆಲ್ಲಾ ಕರೆದು ಈ ರೀತಿ ಹೇಳಿಕೆ ಕೊಟ್ಟಿರುವಾಗ, ಈ ರೀತಿಯಾಗಿ ಮಂತ್ರಿಮಂಡಲದಲ್ಲಿರುವ ನೀವುಗಳು ಇವೊತ್ತು ರಾಜ್ಯ ಸರ್ಕಾರದ ಹಿತವನ್ನು ಕಾಪಾಡಬಲ್ಲಿರಾ ಎಂಬ ಸಂಶಯ ಬರುತ್ತದೆ ತಾನೇ? ರಾಜ್ಯದ ಹಿತ ಕಾಪಾಡುವುದಕ್ಕೆ ನಿಮಗೆ ಸಾಧ್ಯವಿಲ್ಲ ಎಂದಾಗುತ್ತದೆ ತಾನೇ? ಈಗ ಎರಡೇ ಮಾರ್ಗ ಇರುವಂಥದ್ದು. ಮೊದಲನೆಯದು, ಈ ರೀತಿಯಾಗಿ ಆರೋಪ ಮಾಡುವಂತಹವರ ಮೇಲೆ ತನಿಖೆ ನಡೆಸಬೇಕು. ಇಲ್ಲವೇ, ಇದರ ಗುರುತರವಾದ ಜವಾಬ್ದಾರಿಯನ್ನು ನೀವೇ ವಹಿಸಿಕೊಂಡು ನೀವು ರಾಜೀನಾಮೆ ಕೊಟ್ಟು ಹೋಗಬೇಕಾಗುತ್ತದೆ. ಪ್ರಾಮಾಣಿಕವಾಗಿ ನಿಮ್ಮ ಬಳಿ ಹೇಳಬೇಕೆಂದರೆ, ಇವೊತ್ತಿನ ಗೊಂದಲ, ಈ ಸಮ್ಮಿಶ್ರ ಸರ್ಕಾರದ ಇವೊತ್ತಿನ ಪರಿಸ್ಥಿತಿ ಎಲ್ಲಿಗೆ ಬಂದು ಮುಟ್ಟಿದೆ ಎಂದರೆ, ನೀವು ಅಧಿಕಾರದಲ್ಲಿ ಮುಂದುವರೆಯುವುದಕ್ಕೆ ಆಗದಿರುವ, ಉಸಿರುಕಟ್ಟುವಂಥ ಒಂದು ಪರಿಸ್ಥಿತಿ ಬಂದಿದೆ. ಎಂದಾದ ಮೇಲೆ, ಆ ರೀತಿಯ ಒಂದು ನೈತಿಕ ಸ್ಥೈರ್ಯವನ್ನು ನೀವು ಕಳೆದುಕೊಂಡಿದ್ದೀರಿ, ಅಧಿಕಾರದಲ್ಲಿ ಮುಂದುವರೆಯಲು ಸಾಧ್ಯವೇ ಇಲ್ಲವೆನ್ನುವಂತಹ ಪರಿಸ್ಥಿತಿ ಬಂದಿರಬೇಕಾದರೆ...

(ಗೊಂದಲ)

ಮಾನ್ಯ ಸದಸ್ಯರು: ಬರೀ ವಿರೋಧ ಪಕ್ಷದವರ ಮಾತನ್ನು ಕೇಳುವುದಕ್ಕೆ ನಾವಿಲ್ಲಿ ಬಂದಿಲ್ಲ. ಈ ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ ನಾವು ಬಂದಿರುವುದು.

ಶ್ರೀ ಬಿ.ಎಸ್.ಯಡಿಯೂರಪ್ಪ: ಈಗ ಉಪ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರ ಬಗ್ಗೆ ಏನೇನೋ ನಡೆಯುತ್ತಿದೆ, ನಾವು ಅದನ್ನು ಇಲ್ಲಿ ಪ್ರಸ್ತಾಪ ಮಾಡಿದ್ದೇವೆಯೇ? ಮಾಡಿಲ್ಲ. ಅದು ನಿಮಗೆ ಬಿಟ್ಟಿದ್ದು ಆ ವಿಚಾರವನ್ನು ನಾವು ಪ್ರಸ್ತಾಪಿಸಿಲ್ಲ. ಮಾನ್ಯ ದೇವೇಗೌಡರು ಒಂದು ಹೇಳಿಕೆ ಕೊಟ್ಟಿರುವುದರ ಬಗ್ಗೆ ನಾವು ಪ್ರಸ್ತಾಪಿಸಿದ್ದೇವೆಯೇ? ಇಲ್ಲ. ಕ್ಯಾಬಿನೆಟ್ ಮಿನಿಸ್ಟರ್ ಆದವರು ಈ ರೀತಿಯಾಗಿ ಆರೋಪ ಮಾಡಿದಾಗ... ದೇವೇಗೌಡರು ಮಾತನಾಡುತ್ತಾ 'ಚೀಫ್ ಜಸ್ಟೀಸ್ ಆಫ್ ಇಂಡಿಯಾ ಅವರನ್ನು ಬೇಟಿ ಮಾಡುತ್ತೇನೆ, ರಾಷ್ಟ್ರಪತಿಯವರನ್ನು ಭೇಟಿ ಮಾಡುತ್ತೇನೆ' ಎಂದು ಹೇಳಿದ್ದಾರೆ. 45 ಸಾವಿರ ಎಕರೆಗಳಷ್ಟು ಭೂ ಕಬಳಿಕೆಯಾಗಿರುವ ಸಂಬಂಧದ ಹಿನ್ನೆಲೆಯಲ್ಲಿ ನಾವು

ಇದನ್ನು ಪ್ರಸ್ತಾಪಿಸುತ್ತಿಲ್ಲ ನಿಮ್ಮ ಕ್ಯಾಬಿನೆಟ್ ಕಲೀಗ್ಸ್ ಈ ರೀತಿಯ ಆರೋಪ ಮಾಡುತ್ತಿದ್ದಾರೆಂದ ಮೇಲೆ, ಇಂತಹ ಸಂದರ್ಭದಲ್ಲಿ ಅವರ ಮೇಲೆ ನೀವು ಕ್ರಮ ಕೈಗೊಳ್ಳಲು ಏಕೆ ಹಿಂದು-ಮುಂದು ನೋಡುತ್ತಿದ್ದೀರಿ? ನಾವು ನಿಮ್ಮ (ಮುಖ್ಯಮಮತ್ರಿ) ಮೇಲೆ ಆರೋಪ ಮಾಡಿದ್ದೇವೆಯೇ? ಇಲ್ಲ ಮಂತ್ರಿಗಳು ಈ ರೀತಿಯಾಗಿ ಆರೋಪ ಮಾಡಿದ ನಂತರ ಪ್ರತಿಪಕ್ಷದವರಾಗಿ ನಾವು ನಮ್ಮ ಜವಾಬ್ದಾರಿ ನಿರ್ವಹಿಸಬೇಕು. ನಾವು ಕೈಕಟ್ಟಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಆ ಸಚಿವರನ್ನು ಕೈಬಿಟ್ಟು ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಅದು ಶಿವರಾಂ ಇರಬಹುದು ಅಥವಾ ರೇವಣ್ಣನವರಿರಬಹುದು. ಮತ್ತೊಬ್ಬರಿರಬಹುದು.

(ಗೊಂದಲ)

ಅಧ್ಯಕ್ಷರು: ಈಗ ಪ್ರಶ್ನೋತ್ತರ ತೆಗೆದುಕೊಳ್ಳೋಣ. ದಯಮಾಡಿ ತಾವೆಲ್ಲರೂ ಸಹಕರಿಸಬೇಕು. ತಾವೆಲ್ಲರೂ ಕುಳಿತುಕೊಳ್ಳಿ. ಯಡಿಯೂರಪ್ಪನವರೆ, ಜಗದೀಶ್ ಶೆಟ್ಟರ್‌ರವರೆ, ಜಗದೀಶ್ ಶೆಟ್ಟರ್‌ರವರೆ, ತಾವು ಪ್ರಸ್ತಾಪಿಸಿರುವ ಎಲ್ಲಾ ವಿಚಾರಗಳಿಗೂ, ಸಮಸ್ಯೆಗಳಿಗೂ ಮಾನ್ಯ ಮುಖ್ಯಮಂತ್ರಿಗಳು ವಿವರವಾಗಿ ಉತ್ತರ ಕೊಟ್ಟಿದ್ದಾರೆ. ಆದುದರಿಂದ ಈಗ ಸದನದ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ದಯಮಾಡಿ ಅವಕಾಶ ಮಾಡಿಕೊಡಿ. ನೋಡಿ, ಈಗ ಅಧಿವೇಶನ ಪ್ರಾರಂಭಗೊಂಡು ಎಷ್ಟು ದಿವಸಗಳಾಯಿತು? ಅರು ದಿವಸಗಳಾದ ಬಳಿಕವೂ ನಾವು ಯಾವುದೇ ಬೇಡಿಕೆಗಳ ಮೇಲೆ...

(ಗೊಂದಲ)

(ಬಿಜೆಪಿ ಸದಸ್ಯರುಗಳು ಘೋಷಣೆಗಳನ್ನು ಕೂಗುತ್ತಿದ್ದರು)

ಅಧ್ಯಕ್ಷರು: ಎಷ್ಟೋ ದಿವಸಗಳಿಂದ ನಾನು ಹೇಳುತ್ತಿದ್ದೇನೆ, ದಯಮಾಡಿ ಕೂಗಬಾರದು. ಸದನದ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ದಯಮಾಡಿ ಅವಕಾಶ ಮಾಡಿಕೊಡಿ.

(ಗೊಂದಲ)

ಅಧ್ಯಕ್ಷರು: ಈಗ ಸದನವನ್ನು ನಾಳೆ ಬೆಳಿಗ್ಗೆ 10.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

ಸದನವು ಮಧ್ಯಾಹ್ನ 1 ಗಂಟೆ 15 ನಿಮಿಷಕ್ಕೆ ಮುಂದೂಡಲ್ಪಟ್ಟು, ಪುನಃ ದಿನಾಂಕ 8ನೇ ಜುಲೈ ಮಾಹೆ 2005ರ ಶುಕ್ರವಾರದಂದು ಬೆಳಿಗ್ಗೆ 10.00 ಸೇರಲು ನಿಶ್ಚಯಿಸಿತು)